ರಾಜ್ಯದಲ್ಲಿ ಮೀನುಗಾರಿಗೆ ಸಬ್ಸಿಡಿ

1344 (1510) ಶ್ರೀ ಸದಾನಂದಗೌಡ ಡಿ.ವಿ. (ಪುತ್ತೂರು): ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಮೀನುಗಾರಿಕೆಗೆ ಕೊಡುವ ವಿವಿಧ ಸಬ್ಸಿಡಿ ಸೌಲಭ್ಯಗಳು ಯಾವುವು; ಡೀಸೆಲ್ ಸಬ್ಸಿಡಿಗಾಗಿ ರಾಜ್ಯ ಸರ್ಕಾರ ವ್ಯಯಿಸುತ್ತಿರುವ ಮೊತ್ತ ಎಷ್ಟು?

ಆ) ಕರಾವಳಿಯಲ್ಲಿರುವ ಮತ್ಸ್ಯಕ್ಷಾಮದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಮೀನುಗಾರರು ಅತೀವ ಸಂಕಷ್ಟದಲ್ಲಿದ್ದು ಅವರ ಸಮಸ್ಯೆ ಪರಿಹಾರದ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ವಸಂತಿ ವಿ.ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರ್ಯ ಸಚಿವರು):

ಅ) ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಕಳೆದ ಮೀನುಗಾರಿಕೆ ಋತುವಿಗೆ ಹೋಲಿಸಿದಾಗ ಈ ಸಾಲಿನ ಮೀನುಗಾರಿಕೆ ಋತು ವಿನಲ್ಲಿ ಮೀನು ಹಿಡುವಳಿ ಪ್ರಮಾಣ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವತ್ತದೆ. ಈ ಬಗ್ಗೆ ಕೇಂದ್ರ ಸರ್ಕಾರಕದ ಸಿ.ಎಂ.ಎಫ್.ಆರ್.ಐ. ಸಂಸ್ಥೆಯವರ ಅಭಿಪ್ರಾಯವನ್ನು ಕೋರಲಾಗಿ ಕಡಲ ಮೀನುಗಾರಿಕೆಯ ಹಿಡುವಳಿಯಲ್ಲಿ ಏರಿಳಿತ ಉಂಟಾಗುವುದು ಸಾಮಾನ್ಯವೆಂದು ಅಭಿಪ್ರಾಯ ಪಟ್ಟಿರುತ್ತಾರೆ. ಆದಾಗ್ಯ ಈ ಬಗ್ಗೆ ಸಂಶೋಧನೆ ನಡೆಸಿ ವರದಿಯನ್ನು ನೀಡುವಂತೆ ಸದರಿ ಸಂಸ್ಥೆಯನ್ನು ಕೋರಲಾಗುವುದು. ಸಂಶೋಧನಾ ವರದಿ ಬಂದ ನಂತರ ಸೂಕ್ತ ಪರಿಹಾರೋಪಾಯ ಕ್ರಮಗಳನ್ನು ಕೈಗೊಳ್ಳಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1510ಕ್ಕೆ ಅನಬಂಧ

ಈ ಕೆಳಕಂಡ ವಿವಿಧ ಯೋಜನೆಗಳನ್ನು ಸಬ್ಸಿಡಿ ಸೌಲಭ್ಯಗಳೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ.

1) ಅಚ್ಚುಕಟ್ಟು ಪ್ರಾಧಿಕಾರಿಗಳ ಕೃಷಿಗೆ ಯೋಗ್ಯವಲ್ಲದ ಜೌಗು-ಚೌಳು ಪ್ರದೇಶದಲ್ಲಿ ಮೀನು ಕೃಷಿ ಕೊಳಗಳ ನಿರ್ಮಾಣಕ್ಕೆ ಸಹಾಯ ಯೋಜನೆಯಡಿ ಪ್ರತಿ ಎಕರೆಗೆ ಶೇಕಡ 25 ಗರಿಷ್ಟ ರೂ.30,000-00ಗಳ ಸಹಾಯಧನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.

2) ಮೀನುಗಾರರಿಗೆ ಶಾಖಿ ನಿರೋಧಕ ಪೆಟ್ಟಿಗೆಗಳ ಸರಬರಾಜು ಮತ್ತು ಮೀನು ಮಾರಾಟಕ್ಕೆ ಮೀನುಗಾರರಿಗೆ ಸಹಾಯಧನ ಯೋಜನೆಯಡಿ ಶಾಖಿನಿರೋಧಕ ಪೆಟ್ಟಿಗೆ ಮತ್ತು ಬೈಸಿಕಲ್ ಗಳನ್ನು ಖರೀದಿಸಲು ಶೇಕಡ 50 ನೆರವಿನೊಂದಿಗೆ ಗರಿಷ್ಟ ರೂ.1250-00 ಸಾಯಧನ ನೀಡಲಾಗುತ್ತಿದೆ.

3) ದೂರ ತೀರದ ಮೀನುಗಾರಿಕೆ ದೋಣಿಗಳಿಗೆ ವಿದ್ಯುನ್ಮಾನ ಉಪಕರಮಗಳನ್ನು ಖರೀದಿಸಲು ಶೇಕಡ 25 ರಷ್ಟು ಗರಿಷ್ಟ ರೂ.34,000ಗಳ ಸಹಾಯಧನ ನೀಡಲು ಅವಕಾಶವಿರುತ್ತದೆ.

4) 'ಮತ್ಸ್ಯ ವಾಹಿನಿ' ಯೋಜನೆಯಡಿ ತ್ರಿಚಕ್ರ ಟೆಂಪೋ ರೀಕ್ಷಾವನ್ನು ಖರೀದಿಸಲು ಶೇಕಡ 25 ರಷ್ಟು ಗರಿಷ್ಟ ರೂ.25,000-00ಗಳ ಸಹಾಯಧನವನ್ನು ಮೂರು ಅಥವಾ ನಾಲ್ಕು ಫಲಾನುಭವಿಗಳ ಒಂದು ಗುಂಪಿಗೆ ನೀಡಲಾಗುವುದು.

5) "ಖಾಸಗಿ ಕ್ಷೇತ್ರದಲ್ಲಿ ಮಿನು ಕೊಳ ನಿರ್ಮಾಣಕ್ಕೆ ಸಹಾಯಧನ" ಯೋಜನೆಯಡಿ ಒಂದು ಎಕರೆ ಸ್ವಂತ ಜಮೀನಿನ ಮಿನೂ ಕೊಳವನ್ನು ನಿರ್ಮಾಣ ಮಾಡಿ ಮಿನುಗಾರಿಕೆಯನ್ನು ತೆಗೆದುಕೊಳ್ಳಲು ಖಾಸಗಿ ವ್ಯಕ್ತಿಗಳಿಗೆ ಶೇಕಡ 25 ರಷ್ಟು ಗರಿಷ್ಟ ರೂ.10,000-00ಗಳ ಸಹಾಯಧನವನ್ನು ನೀಡಲಾಗುವುದು.

6) ಮಿನುಗಾರರಿಗೆ ಮಿನುಗಾರಿಕೆ ಸಲಕರಣೆಗಳನ್ನು ಕೊಳ್ಳಲು ಸಾಲ ಮತ್ತು ಸಹಾಯಧನವನ್ನು 3:1ರ ಪ್ರಮಾಣದಲ್ಲಿ ನೀಡಲಾಗುತ್ತದೆ ಮತ್ತು ಆರ್ಥಿಕ ಸಂಸ್ಥೆಗಳಿಂದ ಸಾಲ ಪಡೆದು ಕೊಳ್ಳಲು ಒಳನಾಡು ಮಿನುಗಾರರಿಗೆ ಗರಿಷ್ಟ ರೂ.3000-00 ಒಬ್ಬರಿಗೆ, ಒಬ್ಬರಿಗಿಂತ ಹೆಚ್ಚು ಮಿನುಗಾರರ ಗುಂಪಿಗೆ ರೂ.5000-00 ಸಹಾಯಧನವನ್ನು ನೀಡಲಾಗುತ್ತದೆ.

7) ಮಿನುಗಾರರು ಹೆಚ್ಚು ಮಿನು ಹಿಡಿಯಲು ಸಹಾಯವಾಗುವಂತೆ ದೋಣಿಗಳಿಗೆ ಔಟ್ ಬೋರ್ಡ್ ಅಥವಾ ಇನ್‌ಬೋರ್ಡ್ ಎಂಜಿನ್ ಅಳವಡಿಸಲು ಕ್ರಮವಾಗಿ ರೂ.10,000 ಮತ್ತು ರೂ.12.000ಗಳ ಸಹಾಯಧನ ನೀಡಲಾಗುತ್ತಿದೆ.

8) ಸ್ವಂತ ನೀರಾವರಿ ಭಾವಿ ಮತ್ತು ಹೊಂಡಗಳಲ್ಲಿ ಮಿನು ಕೃಷಿಯನ್ನು ತೆಗೆದುಕೊಳ್ಳಲು ಮುಂದೆ ಬರುವ ರೈತರಿಗೆ ಸಹಾಯಧನ ರೂಪದಲ್ಲಿ ಮಿನುಮರಿಯನ್ನು ಬಾವಿ ಮತ್ತು ಹೊಂಡಗಳಲ್ಲಿ ಮಿನುಗಾರಿಕೆ ಅಭಿವೃದ್ಧಿ ಯೋಜನೆಯಡಿ ಒದಗಿಸಲಾಗುವುದು. ಈ ಯೋಜನೆಯನ್ನು ಬಿಜಾಪುರ ಗುಲ್ಬರ್ಗಾ ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

9) ಕೇಂದ್ರ ಪುರಸ್ಕೃತ ಯೋಜನೆ ಮಿನುಗಾರರ ಕಲ್ಯಾಣ ಯೋಜನೆಯಡಿ ಮಾದರಿ ಗ್ರಾಮಗಳ ನಿರ್ಮಾಣವನ್ನು ತೆಗೆದುಕೊಳ್ಳಲಾಗಿದ್ದು ನಿರ್ವಸತಿ ಮಿನುಗಾರಿಗೆ ವಸತಿ ಸೌಲಭ್ಯ, ಕುಡಿಯುವ ನೀರು, ಸಮುದಾಯ ಭವನ ಮುಂತಾದ ಪ್ರಾಥಮಿಕ ಸೌಲಭ್ಯವನ್ನು ಒದಗಿಸಲು ಅವಕಾಶವಿರುತ್ತದೆ. ಪ್ರತಿ ಫಾಲನುಭವಿಗೆ ರೂ.30,000-00ಗಳಿಗೆ ಮೀರದಂತೆ ಮನೆಯನ್ನು ಶೇಕಡ 50 ರಷ್ಟು ಕೇಂದ್ರ ಸರ್ಕಾರದ ನೆರವಿನೊಂದಿಗೆ ನಿರ್ಮಾಣ ಮಾಡಿಕೊಡಲಾಗುವುದು. ಮತ್ಸ್ಯ ಆಶ್ರಯ ಯೋಜನೆಯಡಿ ಹುಡ್ಕೋ ಸಾಲದ ನೆರವಿನೊಂದಿಗೆ ನಿರ್ವಸತಿ ಮಿನುಗಾರರಿಗೆ 5000 ಮನೆ ನಿರ್ಮಾಣವನ್ನು, ತೆಗೆದುಕೊಳ್ಳಲಾಗಿದೆ.

10) ಕೇಂದ್ರ ಪುರಸ್ಕೃತ ಯೋಜನೆ - ಕರಾವಳಿ ಮಿನುಗಾರರಿಗೆ ಉಳಿತಾಯ ಮತ್ತು ಪರಿಹಾರ ಯೋಜನೆಯಡಿ ಎಂಟು ತಿಂಗಳು ಮಿನುಗಾರಿಕೆ ಅವಧಿಯಲ್ಲಿ ಮಿನುಗಾರರಿಗೆ ಮಾಸಿಕ ರೂ.75.00 ವಂತಿಗೆ ಮಾಡಿ ಈ ಮೊತ್ತಕ್ಕೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರವನ್ನು ಸಮಪಾಲನ್ನು ನೀಡಿ ಮಿನುಗಾರಿಕೆ ಇಲ್ಲದ ನಾಲ್ಕು ತಿಂಗಳಲ್ಲಿ ಮಾಸಿಕ ತಲಾ ರೂ.300-00ಗಳನ್ನು ನೀಡಲಾಗುತ್ತಿದೆ.

11) ಕೇಂದ್ರ ಪುರಸ್ಕೃತ ಯೋಜನೆ-ಸಾಮೂಹಿಕ ಅಪಘಾತ ವಿಮಾ ಯೋಜನೆಯಡಿಯಲ್ಲಿ ವಿಮಾ ಕಂತಿನ ಹಣ ತಲಾ ರೂ.14.00ಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರದ ತಲಾ ಶೇಕಡ 50:50 ರಂತೆ ಪ್ರತಿ ವರ್ಷ ದೆಹಲಿಯಲ್ಲಿರುವ ಮಿನುಗಾರಿಕೆ ಸಹಕಾರ

ಸಂಘಗಳ ರಾಷ್ಟ್ರೀಯ ಮಂಡಳಿಗೆ 60,000 ಮೀನುಗಾರರಿಗೆ ವಿಮಾ ಸೌಲಭ್ಯ ಒದಗಿಸಲಾಗಿದೆ. ಮರಣ ಹೊಂದಿದೆ ಮೀನುಗಾರನ ಕುಟುಂಬದವರಿಗೆ ಮತ್ತು ಖಾಯಂ ಆಗಿ ಅಂಗವಿಕಲರಾದವರಿಗೆ ರೂ.50,000-00 ಗಳನ್ನು ಭಾಗಶ: ಅಂಗವಿಕಲರಾದವರಿಗೆ ರೂ.25,000-00 ಗಳ ಪರಿಹಾರವನ್ನು ಕೊಡಲಾಗುವುದು.

2000-2003ನೇ ಸಾಲಿನಲ್ಲಿ ರಾಜ್ಯ ಕರಾವಳಿಯ ಯಾಂತ್ರೀಕೃತ ಮೀನುಗಾರಿಕೆ ದೋಣಿಗಳಿಗೆ 50,000 ಕಿ.ಲೀ.ರಾಜ್ಯ ಮಾರಾಟ ತೆರಿಗೆ ರಹಿತ ಡೀಸಲ್ ಒದಗಿಸಲಾಗುತ್ತಿದೆ. ಈ ಸಂಬಂಧ ಮನ್ನಾ ಮಾಡಿರುವ ರಾಜ್ಯ ಮಾರಾಟ ತೆರಿಗೆಯ ಒಟ್ಟು ಅಂದಾಜು ಮೊತ್ತ ವಾರ್ಷಿಕ ರೂ.14.60 ಕೋಟಿಗಳಾಗುತ್ತದೆ.

ಬಾಗೇಪಲ್ಲಿ ಕ್ಷೇತ್ರ ವ್ಯಾಪ್ತಿಯಲ್ಲಿ ಮರಳು ಸಾಗಾಣಿಕೆಯಿಂದ ಅಂತರ್ಜಲ ಕುಸಿತ

1345 (1498) ಶ್ರೀ ಸಂಪಂಗಿ ಎನ್ (ಬಾಗೇಪಲ್ಲಿ): ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೋಲಾರ ಜಿಲ್ಲೆ ಭಾಗೇಪಲ್ಲಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಅಧಿಕ ಸಂಖ್ಯೆಯಲ್ಲಿ ಮರಳುಗಳ ಸಾಗಾಣಿಕೆ ಮಾಡುತ್ತಿದ್ದು ಇದರಿಂದ ಅಂತರ್ ಜಲ ಮಟ್ಟವು ಕುಸಿದು ಈ ಭಾಗದ ಜನತೆಗೆ ಕುಡಿಯುವ ನೀರು ದೊರೆಯದೇ ಕುಡಿಯುವ ನೀರಿನಲ್ಲಿ ಫ್ಲೋರಿನ್ ಅಂಶವು ಅಧಿಕ ಇದ್ದು, ಇದರಿಂದ ಇಲ್ಲಿನ ಜನತೆಯು ಅನೇಕ ಕಾಯಿಲೆಗಳಿಗೆ ತುತ್ತಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ನೀರಿನಲ್ಲಿ ಫ್ಲೋರಿನ್ ಅಂಶವು ಅಧಿಕ ಪ್ರಮಾಣದಲ್ಲಿದ್ದು ಇದರಿಂದ ಉದ್ಭವಿಸುವ ವಿವಿಧ ಕಾಯಿಲೆಯಿಂದ ಈ ಭಾಗದ ನಾಗರೀಕರು ತೀವ್ರ ರೀತಿಯಲ್ಲಿ ತೊಂದರೆಯಲ್ಲಿದ್ದು ಇದರ ಪರಿಹಾರಕ್ಕೆ ಸರ್ಕಾರವು ಕೈಗೊಳ್ಳುವ ಕ್ರಮವೇನು;

ಇ) ಈ ಭಾಗದ ಮರಳು, ಸಾಗಣಿಕೆಯಿಂದ ಸರ್ಕಾರಕ್ಕೆ ಸಂದಾಯವಾಗುವ ಆದಾಯ ವೆಷ್ಟು; ವಿವರ ಒದಗಿಸುವುದು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು):

ಅ) ಅಂತರ್ಜಲ ಮಟ್ಟ ಕುಸಿದಿರುವುದರಿಂದ ಅಂತರ್ಜಲದಲ್ಲಿ ಫ್ಲೋಪರಿನ್‌ನ ಅಂಶ ಹೆಚ್ಚಾಗಿರುವುದು ಮತ್ತು ಅಲ್ಲಿನ ಜನತೆಗೆ ಖಾಯಿಲೆಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಮರಳು ಸಾಗಾಣಿ ಮಾಡಿರುವುದರಿಂದ ಅಂತರ್ಜಲದಲ್ಲಿ ಫ್ಲೋರಿನ್‌ನ ಅಂಶ ಹೆಚ್ಚಾಗುವುದಿಲ್ಲ.

ಆ) ಅಂತರ್ಜಲ ಕೃತಕ ಮರು ಪೂರೈಕೆ ರಚನೆಗಳಾದ ಚೆಕ್ ಡ್ಯಾಂ, ಇಂಗು ಬಾವಿ, ಇಂಗು ಕೊಳ ಹಾಗೂ ಕೆರೆಗಳಲ್ಲಿ ಹೂಳೆತ್ತುವ ಕಾರ್ಯಕ್ರಮವನ್ನು ಹೆಚ್ಚು ಹೆಚ್ಚಾಗಿ ಹಮ್ಮಿಕೊಳ್ಳುವುದರಿಂದ ಭೂಮಿಯೊಳಗೆ ಮಳೆಯ ನೀರು ಇಂಗಿ ಅಂತರ್ಜಲ ಮಟ್ಟ ಹಾಗೂ ಅದರ ಗುಣಮಟ್ಟವನ್ನು ಹೆಚ್ಚಿಸುವ ಸಾಧ್ಯತೆ ಇದೆ. ಅದರಂತೆ ಹೆಚ್ಚು ಹೆಚ್ಚು ರಚನೆಗಳನ್ನು ನಿರ್ಮಿಸುವ ಕಾರ್ಯಕ್ರಮವನ್ನು ಸರ್ಕಾರ ಹಮ್ಮಿಕೊಂಡಿದೆ.

ಇ) ಈ ಭಾಗದಲ್ಲಿ ಮರಳು ಸಾಗಾಣಿಕೆಯಿಂದ ಈವರೆಗೆ ಸಂದಾಯವಾಗಿರುವ ಆಧಾಯ ಒಟ್ಟು ರೂ.9,14,450-00.